> ಗಳಿಗೆಯ ಅಪ್ಪುಗೆಯಿಂದ ತೃಪ್ತಳಾಗಿ ಹೊರಹೋಗುವ ರೇಣುಕಾಳನ್ನು ತಡೆದು ನಿತಾಂತವಾದ ಜೀವಪ್ರೀತಿಯಲ್ಲಿ ಅವಳನ್ನು ನಾವೂ ತಬ್ಬಿಬಿಡಬೇಕೆಂದು ಅಯಾಚಿತವಾಗಿ ಆಸೆಯಾಗುತ್ತದೆ. ಇದು ಬದುಕಿನ ಅನೂಹ್ಯ ನಡೆಯೆ? ದುರಂತವೆ? ಅಸಹಾಯಕತೆಯೆ?...

ನೋವು ತುಂಬಿಬಿಡುತ್ತದೆ. ಯಾರನ್ನೂ ತಿರಸ್ಕಾರದಿಂದ ನೋಡುವ ಮುನ್ನೊಮ್ಮೆ ಏನಿದ್ದೀತು ಎನ್ನುವ ಪ್ರಶ್ನೆಯನ್ನಾದರೂ ಹಾಕಿಕೊಳ್ಳುವ ವಿವೇಕವನ್ನು ಜಾಗೃತಗೊಳಿಸುತ್ತದೆ.

ಸಂತೋಷ್ ಏಚ್ಚಿಕ್ಕಾನಂ ಅವರ 'ನಾಯಿ ಕಾಪು' ಕತೆ ಕ್ರೌರ್ಯ, ಮುಗ್ಧತೆ, ಒಳಿತಿನ ಹಂಬಲ, ಸ್ವಾರ್ಥ, ಮಹತ್ವಾಕಾಂಕ್ಷೆ ಈ ಎಲ್ಲವುಗಳ ಮೊತ್ತವಾದ ಮನುಷ್ಯ ಗಳಿಗೆ ಗಳಿಗೆಗೂ ಎನ್ನುವಂತೆ, ಸನ್ನಿವೇಶಗಳ ಮತ್ತು ಸಹಜೀವಿಗಳ ಸಂಪರ್ಕದಲ್ಲಿಯೇ ಹೇಗೆ ರೂಪಾಂತರವಾಗುತ್ತಾನೆ ಎನ್ನುವುದನ್ನು ಸೊಗಸಾಗಿ ಹೇಳುತ್ತದೆ. ಪ್ರಯಾಣಿಕರನ್ನು ದೋಚುವ ಪ್ರಯತ್ನವೊಂದಕ್ಕೆ ಮೊಟ್ಟಮೊದಲಬಾರಿಗೆ ಕೈ ಹಾಕುವ ವ್ಯಕ್ತಿ ಪ್ರಯಾಣಿಕನ ಬದುಕಿನ ಕಥನವನ್ನು ಕೇಳ ಕೇಳುತ್ತಲೇ ಬದಲಾಗುವ, ದರೋಡೆಯ ಪ್ರಯತ್ನದಿಂದ ವಿಮುಖನಾಗುವ ನಾಟಕೀಯ ಕತೆ ಇದು. ಕತೆಯ ತಂತ್ರ ಮಾತ್ರ ನಮ್ಮನ್ನು ಅಪಾರವಾಗಿ ಸೆಳೆಯುತ್ತದೆ. ಕ್ಯಾಬ್‌ನ ಡ್ರೈವರ್, ದರೋಡೆ ಮಾಡಲು ಹೊರಟ ತನ್ನ ಆಲೋಚನೆಗೆ ಬೇಕಾದ ಸಮರ್ಥನೆಗೆ ಪ್ರಯಾಣಿಕನನ್ನೇ – ಡ್ರೈವರ್‌ನ ಸಂಬಳದಲ್ಲಿ ಮನೆ, ಇಬ್ಬರು ಮಕ್ಕಳ ಶಿಕ್ಷಣದ ಖರ್ಚು, ಮನೆ ಬಾಡಿಗೆ ಈ ಎಲ್ಲವನ್ನೂ ನಿಭಾಯಿಸುವ ಕಷ್ಟ, ಅದಕ್ಕಾಗಿ ಹುಡುಕಲೇ ಬೇಕಾದ ಇತರ ಆದಾಯದ ಮೂಲಗಳ ಬಗ್ಗೆ ಮಾತನಾಡುತ್ತಾ ಹೋಗುತ್ತಾನೆ. ಇದರ ಅರಿವೇ ಇಲ್ಲದ ಪ್ರಯಾಣಿಕ ಕಾರಿನ ಡ್ರೈವರನೇ ಆಗಿದ್ದ ತನ್ನ ಅಪ್ಪ ಅಜ್ಜ, ಅವರು ಎದುರಿಸಿದ ಎಂಥ ಸನ್ನಿವೇಶಗಳಲ್ಲೂ ಬಿಟ್ಟುಕೊಡದ ಪ್ರಾಮಾಣಿಕತೆಯ ಕಥನಗಳನ್ನು ಹೇಳುತ್ತಲೇ ನಿಧಾನವಾಗಿ ಇವನು ತಾನಿನ್ನೂ ಪ್ರಯಾಣಿಸಿರದ ದುರ್ಮಾರ್ಗದಲ್ಲಿ ಪ್ರಯಾಣ ಆರಂಭಿಸುವ ಅವಶ್ಯಕತೆಯೇ ಇಲ್ಲವೆನ್ನುವ ತೀರ್ಮಾನಕ್ಕೆ ಬರುತ್ತಾನೆ.

ಈ ನಮ್ಮ ಕಾಲವನ್ನು 'ಅಂತಃಕರಣಕ್ಕೆ ಬರ ಬಂದ ಕಾಲ' ಎನ್ನಲಾಗುತ್ತದೆ. ಮನುಷ್ಯ ಆಸೆ–ಸ್ವಾರ್ಥ ಮತ್ತು ಕೊನೆಯೇ ಇಲ್ಲದ ಮಹತ್ವಾಕಾಂಕ್ಷೆಯ ಬೆಟ್ಟವೇ ಆಗಿರುವ, ಅದರ ನೂರಾರು ಅಡ್ಡ ಪರಿಣಾಮಗಳಲ್ಲಿ ಒಮ್ಮೊಮ್ಮೆ ಮಾನವ ಸಮುದಾಯವೇ ದಿಕ್ಕೆಟ್ಟು ಹೋಗಿದೆಯೇನೋ ಅನ್ನಿಸುವ ನೂರಾರು ಸಂದರ್ಭಗಳ ಭಾಗವಾಗಿದ್ದೇವೆ ನಾವು. ಈ ಕತೆಗಳು ದಾಹವಾದಾಗ ಕುಡಿಯುವ ನೀರಿನಂತೆ ಜೀವದಾಯಿಯಾಗಿವೆ. ಮನುಷ್ಯ ನಿಜವಾಗಿ ಇರುವ, ಇರಬೇಕಾದ ಸ್ಥಿತಿಗಳೆರಡನ್ನೂ ಹೇಳುತ್ತವೆ.

ಕೃತಿಯಿಂದ ಕೃತಿಗೆ ಗಂಗಾಧರನ್ ಅವರ ಅನುವಾದಗಳು ಮತ್ತಷ್ಟೂ ಕನ್ನಡದವಾಗುತ್ತಿವೆ. ಎಲ್ಲೋ ತೀರ ಕೆಲವು ಕಡೆ ಮಾತ್ರ ಅದು ಕೃತಕವೆನಿಸುವುದನ್ನು ಬಿಟ್ಟರೆ ಕತೆಗಳು ಕನ್ನಡದ ಕತೆಗಳ ಅಪ್ಪಟತನವನ್ನು ಗಳಿಸಿಕೊಂಡಿವೆ. ಇಷ್ಟೇ ಮುಖ್ಯವಾಗಿ ಕತೆಗಳ ಆಯ್ಕೆಗಾಗಿಯೂ ಗಂಗಾಧರನ್ ಅವರನ್ನು, ಇಂಥ ಮಹತ್ವದ ಸಂಕಲನವನ್ನು ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿಯನ್ನು ಅಭಿನಂದಿಸಬೇಕು.